# ಗಾಣದ ಕನ್ನಪ್ಪ: ಒಂದು ಚಾರಿತ್ರಿಕ ಚಿಂತನೆ

ಶ್ರೀಶೈಲ ಬಬಲಾದ[1] & ಎಸ್.ವಾಯ್. ಮುಗಳಿ[2]

[1]ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ.ಚ.ಚ.ಹೆಬ್ಬಾಳ ಸರಕಾರಿ ಪ್ರಥಮದರ್ಜೆ ಮಹಾವಿದ್ಯಾಲಯ, ಗೊಳಸಂಗಿ.

[2]ಸಂಶೋಧನಾ ಮಾರ್ಗದರ್ಶಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.18008712

## ABSTRACT:

ಗಾಣದ ಕನ್ನಪ್ಪ ಕುಟುಂಬದಿಂದ ಗಾಣಿಗನಾಗಿದ್ದನೆಂಬುದು ಸ್ಪಷ್ಟವಾಗಿದ್ದರೂ, ವೃತ್ತಿಯಿಂದ ಗಾಳಹಾಕಿ ಮೀನು ಹಿಡಿಯುವ ಮೀನುಗಾರನೆಂಬುದು ಲೇಖನದಲ್ಲಿ ಕಾಣಸಿಗುತ್ತದೆ. ತನ್ನ ಕಾಯಕದಿಂದ ಪವಾಡಪುರುಷನಾಗಿ ಶಿವನ ಪರಮಭಕ್ತನಾಗಿ ವಚನಗಳ ಮೂಲಕ ಜನರಲ್ಲಿರುವ ಅಹಂಕಾರ, ಮೌಢ್ಯಗಳನ್ನು ದೂರೀಕರಿಸಿದ ಶರಣ. ಕೆಲವೇ ವಚನಗಳನ್ನು ಬರೆದಿದ್ದರೂ ಸಹ ಬಹುಸಂಖ್ಯಾತರಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸಿದ ಮಹಾನ್ ಶರಣ. ಜಂಭದಿಂದ ಮೆರೆಯುತ್ತಿರುವ ಕೆಲವು ಜಂಗಮರಿಗೆ ತನ್ನ ಶಿವಭಕ್ತಿಯಿಂದಲೇ ಅರಿವನ್ನು ಮೂಡಿಸಿ ಅಹಂಕಾರವನ್ನು ದೂರಮಾಡಿದ ಮಹಾಮಹಿಮ ಎಂದೇ ಚರಿತ್ರೆಯಲ್ಲಿ ಸ್ಥಾನ ಪಡೆದುಕೊಂಡವ ಗಾಣದ ಕನ್ನಪ್ಪ. ಆದರೆ ಈತನ ಕುಟುಂಬದ ಕುರಿತಾಗಿ ಇನ್ನೂ ಅನೇಕ ಅಧ್ಯಯನಗಳಾದಾಗ ಮಾತ್ರ ಈತನು ಗಾಣದ ಕನ್ನಪ್ಪನೋ? ಗಾಳದ ಕನ್ನಪ್ಪನೋ ಎಂಬುದು ನಿರ್ಧರಿಸಲು ಸಾಧ್ಯ.

## KEYWORDS:

ಗಾಣದ, ಗಾಳದ, ಚತುರಾಚಾರ್ಯ ಪುರಾಣ, ಗಾನದ ಕನ್ನಪ್ಪ, ದಾಸೋಹ, ಗುಹೇಶ್ವರನ ಶರಣ ಅಲ್ಲಮ, ಗಾಣವರೆ ಬೀಸುವಲೆ.

**ಪೀಠಿಕೆ:**

ಗಾಣಿಗ ಜನಾಂಗವು ಅತ್ಯಂತ ಪ್ರಾಚೀನವಾದ ಜನಾಂಗವಾಗಿದೆ. ಗಾಣಿಗ ಜನಾಂಗದ ಜನರು ಅಪಾರ ಪರಿಶ್ರಮಿಗಳು, ಕಷ್ಟಜೀವಿಗಳು, ತಮ್ಮ ಕಾಯಕದ ಮೂಲಕ ಲೋಕವಿಖ್ಯಾತಿಯನ್ನು ಪಡೆದುಕೊಂಡವರು. ಪುರಾಣ–ಇತಿಹಾಸಗಳ ಅಧ್ಯಯನದಿಂದ ಗಾಣಿಗ ಜನಾಂಗದ ಇತಿಹಾಸವನ್ನು ಅರಿತುಕೊಳ್ಳಬಹುದು. ಕರ್ನಾಟಕ ಗಾಣಿಗರಲ್ಲಿ ಹಲವು ಪಂಗಡಗಳಲ್ಲಿ ಲಿಂಗಾಯತ ಗಾಣಿಗ ಪಂಗಡವು ಒಂದು. ಬಸವಣ್ಣನವರು 12ನೇ ಶತಮಾನದಲ್ಲಿ ಜಾತಿ ಪದ್ಧತಿಯನ್ನು ವಿರೋಧಿಸಿ ಕಾಯಕ–ದಾಸೋಹ–ಸ್ವಾತಂತ್ರ್ಯ–ಸಮಾನತೆಗಳ ಆಧಾರದ ಮೇಲೆ ಲಿಂಗಾಯತಧರ್ಮವನ್ನು ಸಂಸ್ಥಾಪಿಸಿದರು. 12ನೇ ಶತಮಾನದಲ್ಲಿ ಗಾಣಿಗ ಸಮುದಾಯದ ಅನೇಕ ಶರಣರು ಬಸವಣ್ಣನವರ ಪ್ರಭಾವಲಯದಲ್ಲಿ ಅನುಭಾವ ಮತ್ತು ಆಧ್ಯಾತ್ಮಿಕತೆಯಲ್ಲಿ ಅತ್ಯುನ್ನತ ಹಂತವನ್ನು ತಲುಪಿ ಗಾಣಿಗ ಜನಾಂಗಕ್ಕೆ ಘನತೆ ಗೌರವಗಳನ್ನು ತಂದುಕೊಟ್ಟವರಾಗಿದ್ದಾರೆ. ಅವರಲ್ಲಿ ಗಾಣದ ಕನ್ನಪ್ಪನವರು ಒಬ್ಬರಾಗಿದ್ದಾರೆ. ಗಾಣದ ಕನ್ನಪ್ಪನವರನ್ನು ಇಂದು ಗಾಣಿಗ ಸಮುದಾಯ ತಮ್ಮ ಗುರುವೆಂದು ಒಪ್ಪಿಕೊಂಡಿದೆ. ಆದರೆ ಕನ್ನಪ್ಪನವರ ವೃತ್ತಿಯನ್ನು ಆಧರಿಸಿ ಹೇಳುವುದಾದರೆ ಅವರು ಗಾಣಿಗರಲ್ಲ ಎಂಬುದು ತಿಳಿಯುತ್ತದೆ. ಗಾಣದ ಕನ್ನಪ್ಪನವರು ವಚನಗಳನ್ನು ರಚಿಸಿದ್ದಾರೆ. ಅವರ ವಚನಗಳಲ್ಲಿ ಪ್ರಸ್ತಾಪಗೊಂಡ ಪಾರಿಭಾಷಿಕ ಪದಗಳ ಅಧ್ಯಯನವನ್ನು ಮಾಡಬಹುದಾಗಿದೆ. ಈ

ಹಿನ್ನೆಲೆಯಲ್ಲಿ ಗಾಣದ ಕನ್ನಪ್ಪನವರೋ ಅಥವಾ ಗಾಳದ ಕನ್ನಪ್ಪನವರೋ ಎಂಬ ವಿಷಯ ಕುರಿತು ಚಾರಿತ್ರಿಕ ಚಿಂತನೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ.

**ಆಕರಗಳು:**

ಗಾಣದ ಕನ್ನಪ್ಪನೋ ಗಾಳದ ಕನ್ನಪ್ಪನೋ ಎಂಬುದು ಇಂದು ಸಂದಿಗ್ಧ ಪ್ರಶ್ನೆಯಾಗಿದೆ. ಕವಿ ಚರಿತ್ರೆಕಾರ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ 'ಗಾನದ ಕನ್ನಪ್ಪ' ಎಂದು ಉಲ್ಲೇಖಿಸಿದ್ದಾರೆ. ಡಾ. ಫ.ಗು.ಹಳಕಟ್ಟಿಯವರು ತಮ್ಮ ಶಿವಶರಣರ ಚರಿತ್ರೆಗಳು ಭಾಗ–3 ಕೃತಿಯಲ್ಲಿ 'ಗಾನದ ಕನ್ನಪ್ಪ' ಎಂದೇ ಕರೆದಿದ್ದಾರೆ. ಕನ್ನಪ್ಪನ ಉಲ್ಲೇಖವಿರುವ ಪ್ರಾಚೀನ ಕಾವ್ಯಕೃತಿಗಳಾದ ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರ ಪುರಾಣ, ಪರ್ವತೇಶನ 'ಚತುರಾಚಾರ್ಯ ಪುರಾಣ', 'ಬಸವೇಶ್ವರ ಪುರಾಣದ ಕಥಾಸಾಗರ', 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ', 'ಶರಣ ಲೀಲಾಮೃತ' ಎಂಬ ಕೃತಿಗಳಲ್ಲಿಯೂ 'ಗಾನದ ಕನ್ನಪ್ಪ' ಎಂದೇ ಉಲ್ಲೇಖಗೊಂಡಿದೆ. ಗಾನದ ಕನ್ನಪ್ಪ ಅಲ್ಲ, ಅದು ಗಾಳದ ಕನ್ನಪ್ಪ ಎಂದು ಮೊದಲು ಊಹಿಸಿದವರು ಕೆ.ಪಿ. ಶಿವಲಿಂಗಯ್ಯನವರು. ಅವರು 'ಬಸವೇಶ್ವರ ಸಮಕಾಲೀನರು' ಎಂಬ ಕೃತಿಗೆ ಬರೆದ 'ಗಾನದ ಕನ್ನಪ್ಪ' ಲೇಖನದಲ್ಲಿ ಮೊದಲ ಬಾರಿಗೆ 'ಗಾಳದ ಕನ್ನಪ್ಪ' ಎಂದು ಹೇಳಲಾಗಿದೆ.

**ಕನ್ನಪ್ಪನ ಜೀವನ ವೃತ್ತಾಂತ:**

ಗಾಣದ ಕನ್ನಪ್ಪ ಬಸವೇಶ್ವರನ ಸಮಕಾಲೀನನೆನ್ನಲಾದ ಒಬ್ಬ ಶಿವಶರಣ, ವಚನಕಾರ, ಕನ್ನಯ್ಯಪ್ರಿಯ ಗುಹೇಶ್ವರನ ಶರಣ, ಗುಹೇಶ್ವರನಲ್ಲಯ್ಯ ಎಂಬ ಅಂಕಿತಗಳಲ್ಲಿ ವಚನಗಳನ್ನು ರಚಿಸಿದ್ದಾನೆ. ವೃತ್ತಿಯಿಂದ ಈತ ಮೀನುಗಾರ. ಗುರುರಾಜಚಾರಿತ್ರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಗ್ರಂಥಗಳಲ್ಲಿ ಈತನ ಪ್ರಸ್ತಾಪವಿದೆ. 1ಕಲ್ಯಾಣಪಟ್ಟಣದ ತ್ರಿಪುರಾಂತಕ ಕೆರೆಯಲ್ಲಿ ಗಾಳಹಾಕಿ ಮೀನು ಹಿಡಿಯುವ ಕಾಯಕದಲ್ಲಿ ಪ್ರವೃತ್ತನಾದ ಕನ್ನಪ್ಪ ಹಾಗೂ ಆತನ ಧರ್ಮಪತ್ನಿ ರೇಚವ್ವೆ ಶಿವಭಕ್ತಿ ಸಂಪನ್ನರು. ಇವರು ಶಿವಾನುಭವ ಸದ್ಗೋಷ್ಠಿಗಳಲ್ಲಿ ಭಾಗವಹಿಸಿ ಲಿಂಗಭಕ್ತಿಯಲ್ಲಿ ನಿರತರಾಗಿ ಗುಪ್ತಭಕ್ತಿಯುಳ್ಳವರಾಗಿದ್ದರು. ಕನ್ನಪ್ಪ ಅಂದಂದಿಗೆ ಹಿಡಿದ ಮೀನುಗಳನ್ನು ಅಂದ2ಂದೇ ಮಾರಿ ಬಂದ ಹಣದಿಂದ ಜಂಗಮ ಸೇವೆ ಮಾಡುತ್ತಿದ್ದ. ಒಮ್ಮೆ ಈತನಿಗೆ ಗಣಾರಾಧನೆ ಮಾಡಬೇಕೆಂಬ ಅಭಿಲಾ3ಷೆಯಾಯಿತು. ಅಂದು ಲಿಂಗಪ4ೂಜೆಗೆ ಕುಳಿತಾಗ ಅಗೋಚರವಾಗಿ ಒಂದು ದನಿ ನಿನಗೇನು ಬೇಕು – ಎಂದಂತಾಯಿತು. ಕೂಡಲೆ ಕನ್ನಪ್ಪ ಸ್ವರ್ಣಮತ್ಸ್ಯ ಎನ್ನಲಾಗಿ, ಹಾಗೆಯೇ ಆಗಲಿ ಎಂದು ಉತ್ತರವೂ ಬಂತು. ನಿತ್ಯದ ಕಾಯಕದಂತೆ ಕನ್ನಪ್ಪ ಅಂದು ತ್ರಿಪುರಾಂತಕ ಕೆರೆಯಲ್ಲಿ ಗಾಳ ಹಾಕಿದ್ದಾಗ ಚಿನ್ನದ ಮೀನೇ ಅದಕ್ಕೆ ತಗಲಿಕೊಂಡಿತು. ಸಂತೋಷಗೊಂಡ ಕನ್ನಪ್ಪ ಅದನ್ನು ಮಾರಿ ಹೆಚ್ಚು ಹಣ ಪಡೆದು ಶಿವಾನುಭವ ಮಂಟಪಕ್ಕೆ ಹೋಗಿ ಜಂಗಮಮೂರ್ತಿಗಳನ್ನು ತನ್ನ ಮನೆ5ಗೆ ದಾಸೋಹಕ್ಕೆ ಬರಬೇಕೆಂದು ಪ್ರಾರ್ಥಿಸಿದ. ಬಿನ್ನಹದಂತೆ ಜಂಗಮರು ಸಕಾಲಕ್ಕೆ ಈತನ ಮನೆಗೆ ಬರಲ6ಾಗಿ ಅಲ್ಲಿದ್ದ ಸತ್ತ ಮೀನುಗಳು ಹಾಗೂ ಅಲ್ಲಿಯ ವಾಸನೆಯನ್ನು ಸಹಿಸಲಾರದೆ ಅಸಹ್ಯಪಟ್ಟು ಹಿಂದಿರುಗಿದರು. ಅವರನ್ನು ಮತ್ತೆ ಕರೆತರ7ಲು ಬಸವಸದನಕ್ಕೆ ಹೋದಾಗ ಅವರೆಲ್ಲ ಕನ್ನಪ್ಪನಿಗೆ ಛೀಮಾರಿಹಾಕಿ ಕಳುಹಿಸಿದರು.8

ಬಸವಣ್ಣನಿಂದ ವಿಚಾರ ತಿಳಿದ ಕನ್ನಪ್ಪ ಅವರನ್ನೆಲ್ಲ ತ್ರಿಪುರಾಂತಕ ಕೆರೆಯ ಬಳಿಗೆ ಬರಹೇಳಿ, ಅಲ್ಲಿ ಕುಳಿತು ಧ್ಯಾನಾಸಕ್ತನಾದ. ಆಗ ಕಳೆದುಹೋದ ಇಷ್ಟಲಿಂಗಗಳು ನೀರಿನಲ್ಲಿ ತೇಲಿಬಂದವು. ಜಂಗಮರು ತಂತಮ್ಮ ಇಷ್ಟಲಿಂಗಗಳನ್ನು ಪಡೆದು ಕನ್ನಪ್ಪನನ್ನು ಸ್ತುತಿಸಿ

ಹಿಂತಿರುಗಿದರು. ಈತನ ವಚನಗಳಲ್ಲಿ 'ಕನ್ನಯ್ಯಪ್ರಿಯ ಗುಹೇಶ್ವರನ ಶರಣ' ಎಂದೂ 'ಗುಹೇಶ್ವರನಲ್ಲಯ್ಯ' ಎಂದೂ ಅಂಕಿತಗಳಿರುತ್ತವೆ. ಗುರುರಾಜಚಾರಿತ್ರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ – ಈ ಕಾವ್ಯಗಳಲ್ಲಿ ಈತನು ಉಕ್ತನಾಗಿದ್ದಾನೆ, 'ಗಾಣದ' ಎಂಬ ವಿಶೇಷಣವಿದ್ದರೂ, ಇವನು ವೃತ್ತಿಯಿಂದ ಗಾಣಿಗನಲ್ಲ. ಇವನ ವೃತ್ತಿ ಮೀನು ಹಿಡಿಯುವ ಗಾಳಕ್ಕೆ ಸಂಬಂಧಿಸಿದುದು. ಈ ಕಾರಣದಿಂದ ಇವನನ್ನು 'ಗಾಳದ ಕನ್ನಪ್ಪ'ನೆಂದೇ ಕರೆಯುವುದು ಹೆಚ್ಚು ಸಮಂಜಸವಾದುದು[1] ಎಂದು ಕೆ.ಪಿ. ಶಿವಲಿಂಗಯ್ಯ ಅವರು ಹೇಳುತ್ತಾರೆ. ಈತನ ಪತ್ನಿ ರೇಚವ್ವ. ಪ್ರತಿನಿತ್ಯ ಲಿಂಗಪೂಜಾನಂತರ ತ್ರಿಪುರಾಂತಕನ ಕೆರೆಯಲ್ಲಿ ಮೀನು ಹಿಡಿದು, ಅದರ ಮಾರಾಟದಿಂದ ಬಂದ ಹಣದಲ್ಲಿ ಜಂಗಮಸೇವೆ ಮಾಡುತ್ತಿದ್ದನು. ಈತನ ವಚನಗಳು ಒಟ್ಟು 10 ಸಿಕ್ಕಿವೆ. ಒಂದು ವಚನದಲ್ಲಿ ಆತ ಹೀಗೆ ಹೇಳುತ್ತಾನೆ: "ಪುಣ್ಯಪಾಪವಿಲ್ಲಾಗಿ ಯಮನ ಹಂಗಿಲ್ಲ ಬಂದುದನುಂಬನಾಗಿ ಮಾನವರ ಹಂಗಿಲ್ಲ ಭವಗೆಟ್ಟನಾಗಿ ದೈವದ ಹಂಗಿಲ್ಲ ಸತ್ಯಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೆ."[2] ಬಹುಶಃ ಬಯಲದೇಹಿಯಾದ ಅಲ್ಲಮಪ್ರಭುವಿನ ಸರ್ವತಂತ್ರ ಸ್ವತಂತ್ರತೆಯನ್ನು ಈ ವಚನದಲ್ಲಿ ಕನ್ನಪ್ಪ ಅಭಿವ್ಯಕ್ತಗೊಳಿಸಿರಬೇಕೆನಿಸುತ್ತದೆ. ಪ್ರಾಚೀನ ಕಾವ್ಯಕೃತಿಗಳಲ್ಲಿ ಉಲ್ಲೇಖಗೊಂಡ ಕನ್ನಪ್ಪನ ಜೀವನ ವೃತ್ತಾಂತಗಳನ್ನು ಗಮನಿಸಿ ಹೇಳುವುದಾದರೆ–

ಗಾಣದ ಕನ್ನಪ್ಪನೆಂಬ ಶಿವಶರಣನು ಕಲ್ಯಾಣ ಪಟ್ಟಣದಲ್ಲಿ ವಾಸ ಮಾಡಿಕೊಂಡಿದ್ದನು. ಅವನ ಹೆಂಡತಿಯ ಹೆಸರು ರೇಚವ್ವ, ಉಭಯತರು ಶಿವಭಕ್ತಿ ಸಂಪನ್ನರು, ಅವರು ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿ ನಡೆಯುತ್ತಿದ್ದ ಶಿವಾನುಭವ ಸದ್ಗೋಷ್ಠಿಗಳನ್ನು ಕೇಳಿ ಲಿಂಗಭಕ್ತಿಯುಳ್ಳವರಾಗಿ ಸುಸ್ವಾಚರಣೆಯಲ್ಲಿ ನಿರತರಾಗಿದ್ದರು. ಆದರೆ ಉಭಯತರು ಗುಪ್ತಭಕ್ತಿಯುಳ್ಳವರು. ಆದ್ದರಿಂದ ಅವರ ಭಕ್ತಿಯು ಎಷ್ಟು ಗಾಢವಾಗಿದ್ದಿತೆಂಬುದನ್ನು ಯಾರೂ ಅರಿತಿರಲಿಲ್ಲ. ಗಾಣದ ಕನ್ನಪ್ಪನು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಯಾವಾಗಲೂ ಕೇಳುವವನಾದ್ದರಿಂದ ಅವನು ತನ್ನ ಅನುಭಾವಗಳನ್ನು ಕುರಿತು ವಚನಗಳನ್ನು ರಚಿಸುವವನಾದನು. ಈ ಕಾಲದಲ್ಲಿ ಶಿವಾನುಭವ ಮಂಟಪದಲ್ಲಿ ಅತ್ಯಂತ ಮನ್ನಣೆಯನ್ನು ಹೊಂದಿ ಎಲ್ಲರಿಗೂ ಮಾರ್ಗದರ್ಶಿಯಾದವನು ಅಲ್ಲಮ ಪ್ರಭುವು. ಆದ್ದರಿಂದ ಗಾಣದ ಕನ್ನಪ್ಪನು ಅಲ್ಲಮ ಪ್ರಭುವಿನ ಹೆಸರಿನಿಂದಲೆ ತನ್ನ ವಚನಗಳನ್ನು ರಚಿಸಿದ್ದಾನೆ. ಅವನ ವಚನಗಳ ಮುದ್ರಿಕೆಯು 'ಗುಹೇಶ್ವರನ ಶರಣ ಅಲ್ಲಮ' ಎಂಬುದಾಗಿದೆ. ಹೀಗೆ ಕನ್ನಪ್ಪನು ಅನೇಕ ವರ್ಷ ಪರ್ಯಂತರ ಕಲ್ಯಾಣ ಪಟ್ಟಣದಲ್ಲಿ ವಾಸವಾಗಿದ್ದನು.

ಮೀನು ಹಿಡಿಯುವುದೇ ಕನ್ನಪ್ಪನ ದಿನನಿತ್ಯದ ಕಾಯಕವಾಗಿತ್ತು. ಅವನು ದಿನಾಲು ಮುಂಜಾವಿನಲ್ಲಿ ಎದ್ದು ಲಿಂಗ ಪೂಜಾದಿ ಕ್ರಿಯೆಗಳನ್ನು ಮುಗಿಸಿಕೊಂಡು ಗಾಣವರೆ ಬೀಸುವಲೆ ಮೊದಲಾದ ಬಲೆಗಳನ್ನು ತೆಗೆದುಕೊಂಡು ತ್ರಿಪುರಾಂತಕೇಶ್ವರನ ಕೆರೆಯಲ್ಲಿ ಮೀನುಗಳನ್ನು ಹಿಡಿಯುತ್ತ ಕುಳ್ಳಿರುತ್ತಿದ್ದವನು. ಮೀನುಗಳನ್ನು ಹಿಡಿದು ಪೇಟೆಯಲ್ಲಿ ವಿಕ್ರಯಿಸಿ ಬಂದ ಲಾಭವನ್ನು ಜಂಗಮರಿಗೆ ನೀಡಿ ವೀರಶೈವ ಧರ್ಮದ ಪ್ರಕಾರ ಮಾರ್ಗ ಕ್ರಿಯಾಚರಣೆಯನ್ನು ಪಾಲಿಸುತ್ತ ಬಂದನು. ಹೀಗಿರಲು ಒಂದು ದಿವಸ ಅವನ ಮನಸ್ಸಿನಲ್ಲಿ ತನ್ನ ಮನೆಯಲ್ಲಿ ಗಣಪರ್ವವನ್ನು ಮಾಡಬೇಕೆಂಬ ಅಭಿಲಾಷೆಯುಂಟಾಯಿತು. ಆ ದಿನ ಅವನು ತನ್ನ ಲಿಂಗ ಪೂಜೆಯಲ್ಲಿ ನಿರತನಾಗಿ ಕುಳಿತಿರಲು ಆ ಸಮಯದಲ್ಲಿ ನಿನಗೇನು ಬೇಕು ಬೇಡು? ಎಂಬ ಶಬ್ದಗಳು ಅವನ ಕಿವಿಗೆ ತಾಕಿದಂತಾದವು. ಆಗ ಅವನು ನನಗೊಂದು ಸ್ವರ್ಣಮತ್ಸ್ಯವನ್ನು ಕೊಡು ಎಂದು ಉಚ್ಚರಿಸಿದನು. ಹಾಗೆಯೇ ಆಗಲೆಂಬ ಶಬ್ದಗಳನ್ನು ಅವನು ಪುನಃ ಕೇಳಿ

ತ್ರಿಪುರಾಂತಕೇಶ್ವರನ ಕೆರೆಗೆ ಬಂದು ಬಲೆ ಹಾಕಿರಲು ಅವನ ಗಾಳಕ್ಕೆ ಒಂದು ನಿಜವಾದ ಹೇಮದ ಮೀನೇ ತಗುಲಿ ಬಂದಿತು. ಅವನು ಅದನ್ನು ಸಂತೋಷದಿಂದ ತೆಗೆದುಕೊಂಡು ಬೀದಿಗೆ ಬಂದು ಮಾರಿದನು. ಅವನಿಗೆ ಅದರಿಂದ ಭಾರೀ ಹಣವು ದೊರೆಯಿತು, ಆಗ ಅವನು ಶಿವಾನುಭವ ಮಂಟಪಕ್ಕೆ ಹೋಗಿ ಅಲ್ಲಿದ್ದ ಚರಮೂರ್ತಿಗಳಿಗೆ ತನ್ನ ಮನೆಗೆ ಆ ದಿನ ಪ್ರಸಾದಕ್ಕೆ ಬರಬೇಕೆಂದು ಬಿನ್ನಹಮಾಡಿ ಮನೆಗೆ ಬಂದನು. ಭೋಜನ ಸಮಯವಾಯಿತು, ಆಗ ಬಹು ಜನ ಜಂಗಮರು ಅವನ ಮನೆಗೆ ಬರಹತ್ತಿದರು. ಅಲ್ಲಿ ಅವರು ಬಂದು ನೋಡುತ್ತಾರೆಯೇ ಅವನ ಅಂಗಣದಲ್ಲಿ ಸತ್ತ ಮೀನುಗಳೇ ಬಿದ್ದಿದ್ದವು. ಎಲ್ಲೆಲ್ಲಿಯೂ ದುರ್ಗಂಧವೇ ಮುಸುಕಿ ಹೋಗಿತ್ತು. ಅದನ್ನು ನೋಡಿದ ಜಂಗಮರು ಮರಳಿ ಹೊರಟು ಬಸವೇಶ್ವರನ ಮನೆಗೆ ಬಂದರು. ಕನ್ನಪ್ಪನು ಮನೆಯೊಳಗಿಂದ ಹೊರಗೆ ಬರುವಷ್ಟರಲ್ಲಿ ಜಂಗಮರೆಲ್ಲರೂ ಮರಳಿ ಹೋಗಿರುವುದನ್ನು ಕಂಡು, ಅವರನ್ನು ಕರೆತರಲು ಬಸವನ ಮಂದಿರಕ್ಕೆ ಬಂದನು. ಆಗ ಜಂಗಮರೆಲ್ಲರೂ ಕನ್ನಪ್ಪನನ್ನು ಕಂಡು 'ನಿನೆಂತಹ ಭಕ್ತ, ನಿನ್ನ ವಿಭೂತಿ, ರುದ್ರಾಕ್ಷಿ ಮತ್ತು ಲಿಂಗವನ್ನು ನೋಡಿ ನಿನ್ನನ್ನು ನಿಜವಾದ ಶರಣನೆಂದು ನಂಬಿ ಬಂದೆವು. ಆದರೆ ಅಲ್ಲಿಯ ಸ್ಥಿತಿಯನ್ನು ಕಂಡಮೇಲೆ ಇನ್ನೆಂದು ನಿನ್ನ ಮನೆಗೆ ನಾವು ಬಾರೆವು' ಎಂದು ಹೇಳಿ ಅವನ ಲಿಂಗವನ್ನು ಕಿತ್ತು ಹೊರಗೆ ಹಾಕಿದರು.

ಮುಂದೆ ಆ ಜಂಗಮರು ಬಸವೇಶ್ವರನ ಅರಮನೆಯಲ್ಲಿ ಭೋಜನಕ್ಕೆ ಕುಳಿತುಕೊಂಡು ಲಿಂಗಾರ್ಚನೆ ಮಾಡುತ್ತಿರುವಾಗ್ಗೆ ಅವರು ತಮ್ಮ ಲಿಂಗ ಸೆಜ್ಜೆಗಳನ್ನು ನೋಡುತ್ತಾರೆ ಅವುಗಳಲ್ಲಿ ಲಿಂಗವೇ ಇರಲಿಲ್ಲ. ಆಗ ಅವರು ಅಂಜಿ ಜರ್ಜರಿತರಾದರು. ಬಸವೇಶ್ವರನು ಅವರಿಂದ ನಡೆದ ಸಂಗತಿಗಳನ್ನೆಲ್ಲ ತಿಳಿದುಕೊಂಡು ಶಿವನು ಸರ್ವತೋಮುಖನಾಗಿದ್ದಾನೆ, ಈ ಜಂಗಮರು ತಪ್ಪು ಮಾಡಿದ್ದಾರೆಂದು ತಿಳಿದು ಅವನು ತಾನಾಗಿಯೇ ಗಾಣದ ಕನ್ನಪ್ಪನ ಮನೆಗೆ ಬಂದು ಅವನಿಗೆ "ಜಂಗಮರು ನಿನ್ನನ್ನು ಕರೆದು ನಿನ್ನ ಲಿಂಗವನ್ನು ಕಿತ್ತುಕೊಂಡು ಅಪರಾಧ ಮಾಡಿದ್ದಾರೆ; ಅವರನ್ನು ಕ್ಷಮಿಸಿ ಅವರ ಲಿಂಗವನ್ನು ಅವರಿಗೆ ಮರಳಿ ಕೊಡಬೇಕೆಂದು ವಿನಂತಿಸಿಕೊಂಡನು. ಆಗ ಕನ್ನಪ್ಪನು ಜಂಗಮರು ನನ್ನ ಲಿಂಗವನ್ನು ಕಿತ್ತಿದ್ದರ ಪರಿಣಾಮವಾಗಿ ಅವರಿಗೆ ಹೀಗಾಗಿರಬೇಕೆಂದು ಊಹಿಸಿ, ನಾನು ಈಗ ತ್ರಿಪುರಾಂತಕೇಶ್ವರನ ಕೆರೆಗೆ ಹೋಗುವೆನು. ಅಲ್ಲಿಗೆ ಲಿಂಗಗಳನ್ನು ಕಳೆದುಕೊಂಡ ಜಂಗಮರೆಲ್ಲರಿಗೂ ಬರಲು ಹೇಳಿರೆಂದು ಬಸವೇಶ್ವರನಿಗೆ ಮನವಿ ಮಾಡಿಕೊಂಡು, ತಾನು ಕೆರೆಯ ತಡಿಯಲ್ಲಿ ಬಂದು ಶಿವನನ್ನು ಧ್ಯಾನಿಸಹತ್ತಿದನು."[3] ಅಷ್ಟರಲ್ಲಿ ಲಿಂಗವನ್ನು ಕಳೆದುಕೊಂಡ 36 ಜನ ಜಂಗಮರು ಅಲ್ಲಿಗೆ ಬರಲು ಕನ್ನಪ್ಪನು ಧ್ಯಾನದ ಮೂಲಕ ಅವರ 36 ಲಿಂಗಗಳು ಕೆರೆಯ ನೀರಿನ ಮೇಲೆ ಹರಿದು ಬರಹತ್ತಿದವು. ಅವುಗಳನ್ನು ಅವರು ತಿರುಗಿ ತೆಗೆದುಕೊಂಡರು. ಮತ್ತು ಕನ್ನಪ್ಪನಿಗೆ ಶರಣಾಗಿ ಕನ್ನಪ್ಪನೇ ನಾವು ನಿನಗೆ ಅಪರಾಧ ಮಾಡಿದೆವು, ನೀನೇ ನಿಜವಾದ ಶರಣನು, ನೀನೇ ನಮ್ಮ ಗುರುವು ಎಂದು ಸ್ತುತಿಸುತ್ತ ಮರಳಿ ಹೋದರು.

ಕವಿ ಚರಿತ್ರೆಕಾರ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆ ಸಂಪುಟ 2ರಲ್ಲಿ ಗಾನದ ಕನ್ನಪ್ಪ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.[4] ಡಾ. ಹಳಕಟ್ಟಿಯವರ ಶಿವಶರಣರ ಚರಿತ್ರೆ ಸಂಪುಟ 3ರಲ್ಲಿಯೂ 'ಗಾನದ ಕನ್ನಪ್ಪ' ಎಂದೇ ಇದೆ.[5] ಗಾಣದ ಕನ್ನಪ್ಪನ 10 ವಚನಗಳು ಮಾತ್ರ ಇವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ಇಲ್ಲಿ ಉದಹರಿಸುತ್ತೇವೆ.

1. ತನ್ನ ತಾ ಬೀಳುವುದು ಕಂಡು ಹಳ್ಳಿ ಹಗೆಯಾಗಲೇಕೆ? ಒಡೆದುದ ಕಂಡು ಒಡೆಯಿರಿ ಎನಲೇಕೆ? ಮುಡಿಯನರಿಯನರಿಯದೆ ಒಡೆಯರೆಂದು ಕೊಡುವ ಕಾಲ ದಳಿಹಕ್ಕೆ ಇವರರೊಡೆಯರಲ್ಲದೆ ಅಸಮಾಕ್ಷರಲ್ಲ, ಇಂತಿ ಗಸಣಿಗಿನ್ನೇವೆ ಕನ್ನಯ್ಯ ಪ್ರಿಯ

ಗುಹೇಶ್ವರ ಶರಣ ಅಲ್ಲಮ. ಇದು ಅಶುದ್ಧವಾಗಿದೆ, ಅರ್ಥವು ಅಸ್ಪಷ್ಟವಾಗಿದೆ. ಆದರೆ ಇದರ ಮುದ್ರಿಕೆಯಲ್ಲಿ ಕನ್ನಯ್ಯ ಪ್ರಿಯ ಎಂದಿರುವುದರಿಂದ ಈ ವಚನವು ಗಾಣದ ಕನ್ನಪ್ಪನದೆಂದು ಸಿದ್ಧವಾಗುತ್ತದೆ.

2. ಗಾಣವ ಹಾಕಲಾಗಿ ಆಕಾರ ಸಿಕ್ಕಿದರು? ಆರೈಕೆಗೊಳ್ಳಯ್ಯ, ಐದಕ್ಕೊಂದು ಹೋಗಿ ನಾಲ್ಕರಲ್ಲಿ ನಾಚಿಕೆಗೆಟ್ಟ, ಜಗದಾಸೆಯ ಬದುಕಿನಿಂದ ದಶಾವತಾರವಾದ. ಇಷ್ಟರ ಇಂದ್ರಿಯಕ್ಕಾಗಿ ಪಾಶವ ಹೊತ್ತ ತಲೆಯಲ್ಲಿ. ಇಂತಿ ವೇಷಧಾರಿ ಹಾಕಿದ ಗಾಣದಲ್ಲಿ ಕಷ್ಟಕ್ಕೆ ಸಿಕ್ಕಿ ಘಾಸಿಯಾದರು, ಇನ್ನಿಸುವವರಾರಯ್ಯ ಗುಹೇಶ್ವರನ ಶರಣ ಅಲ್ಲಮನಲ್ಲದೆ. ಇದರಲ್ಲಿ ವಚನಕಾರನು ತನ್ನ ಗಾಣ ಹಾಕುವ ಕಾಯಕವನ್ನು ಕುರಿತು ಹೇಳಿದ್ದಾನೆ. ಗಾಣವೆಂದರೆ ಗಾಣಿಗರು ಉಪಯೋಗಿಸುವ ಗಾಣವಿರದೆ ಮೀನು ಬಲೆಗಾರರು ಹಾಕುವ ಬಲೆ ಎಂಬ ಅರ್ಥವು ಈ ಶಬ್ದಕ್ಕೆ ಇದೆ.

3. ನಾ ಬಂದುದಕ್ಕೆ ಮಾಡಿದೆ. ನೀ ಕಳುಹಿದವರ ಕೊಂದೆ, ಬಂದೆ. ನೀವಿರಿಸಿದಂತಿದ್ದು ಎನಗಿನ್ನು ಬಂಧ ಮೋಕ್ಷವೇಕೆ? ಕನ್ನಯ್ಯ ಪ್ರಿಯ ಗುಹೇಶ್ವರನ ಶರಣ ಅಲ್ಲಮನಲ್ಲಿ ಲೇಪವಾದವಂಗೆ. ಉಳಿದ ವಚನಗಳಲ್ಲಿ ಗೂಢಾರ್ಥಗಳಿದ್ದು ಅವು ಬಹು ಅಸ್ಪಷ್ಟವಾಗಿವೆ.

ಶಿವಶರಣರೆಲ್ಲರೂ ಅಹಿಂಸಾವಾದಿಗಳು. ಆದರೆ ಶಿವಶರಣರಲ್ಲಿ ಮೂವರು ಇದಕ್ಕೆ ಅಪವಾದಗಳಾಗಿದ್ದಾರೆ. ಶ್ವಪಚಯ್ಯ, ತೆಲುಗು ಜೊಮ್ಮಯ್ಯ ಮತ್ತು ಗಾಣದ ಕನ್ನಪ್ಪ ಇವರು ಇದ್ದಾರೆ. ಇವರೆಲ್ಲರೂ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿದವರು. ಶ್ವಪಚಯ್ಯನು ಬಸವೇಶ್ವರನಿಗಿಂತಲೂ ಬಹಳ ಹಿಂದಿನವನು, ತೆಲುಗು ಜೊಮ್ಮಯ್ಯನು ಅವನಿಗಿಂತ 60-70 ವರ್ಷ ಮೊದಲು ಇದ್ದವನು, ಆದರೆ ಗಾಣದ ಕನ್ನಪ್ಪನು ಅವನ ಸಮಕಾಲೀನನು, ಇದೊಂದು ವಿಚಾರಾರ್ಹವಾದ ಸಂಗತಿಯಾಗಿದೆ. ಒಂದು ಧರ್ಮವು ಪ್ರಸಾರ ಹೊಂದುವ ಕಾಲದಲ್ಲಿ ಅನೇಕ ವಿಚಾರಗಳನ್ನೊಂದಿದ ಸಮಾಜಗಳ ಜನರು ಅದರಲ್ಲಿ ಬಂದು ಸೇರ್ಪಡೆಯಾಗುವುದುಂಟು. ಅವರು ತಮ್ಮ ಪೂರ್ವದ ಪದ್ಧತಿಗಳನ್ನು ಕೂಡಲೇ ಬಿಡುವುದಿಲ್ಲ, ಆದರೆ ಅವರು ಶುದ್ಧ ಮನಸುಳ್ಳವರು. ಇಂಥವರನ್ನು ಧರ್ಮಸ್ಥಾಪನೆಯ ಆರಂಭದ ಕಾಲದಲ್ಲಿ ಉಪೇಕ್ಷಿಸದೆ ಅವರಿಗೂ ಬೋಧನೆ ಮಾಡಿದ್ದು ಕಂಡುಬರುತ್ತದೆ. ಅವರನ್ನು ಸಮಾಜದಲ್ಲಿ ತೆಗೆದುಕೊಂಡು ಅವರಲ್ಲಿ ತಮ್ಮ ರೀತಿ ನಡೆಗಳನ್ನು ತಿಳಿಸುತ್ತ ಹೋಗಿ ಅವರನ್ನು ಸರಿಯಾದ ಹಾದಿಗೆ ಹಚ್ಚಿರಬಹುದೆಂದು ತೋರುತ್ತದೆ. ಆದ್ದರಿಂದ ವೀರಶೈವರಿಗೆ ಹೊರತಾದ ಆಚಾರಗಳನ್ನು ಪಾಲಿಸುವಂಥ ಶಿವಶರಣರ ಉದಾಹರಣೆಗಳು ಅಲ್ಲಲ್ಲಿ ದೊರಕುತ್ತವೆ. ಆದರೆ ಅವು ಪೂರ್ವಾಶ್ರಮದಲ್ಲಿ ಆದವುಗಳಿರಬಹುದು, ಆದುದರಿಂದ ಶರಣರು ಇಂಥ ನಡೆಗಳನ್ನೂ ಕೆಲವು ಕಾಲ ಉಪೇಕ್ಷಿಸಿಯೂ ಬಿಟ್ಟಿರಬಹುದು. ತಮಿಳುದೇಶದ 63 ಪುರಾತನರ ಚರಿತ್ರೆಗಳಲ್ಲಿಯೂ ಕೂಡ ಇಂಥ ಸಂಗತಿಗಳು ಕಂಡು ಬರುತ್ತವೆ. ಬೇಡರ ಕನ್ನಪ್ಪನು ಮಾಂಸಾಹಾರಿಯು, ಅತಿ ಭಕ್ತನು ಮೀನು ಬಲೆಗಾರನು, ಆದರೂ ಇವರು ವೀರಶೈವರಿಗೆ ಅತ್ಯಂತ ಪೂಜ್ಯರಾಗಿದ್ದಾರೆ ಎಂಬುದು ಗಮನಾರ್ಹ ಸಂಗತಿ. ಒಟ್ಟಾರೆ, ಈ ನನ್ನ ಲೇಖನದ ಮೂಲಕ ಗಾಣದ ಕನ್ನಪ್ಪ ಎನ್ನುವ ಬದಲಾಗಿ 'ಗಾಳದ ಕನ್ನಪ್ಪ' ಎಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

**ಕೊನೆ ಟಿಪ್ಪಣಿಗಳು:**

1. ಕೆ.ಪಿ.ಶಿವಲಿಂಗಯ್ಯ : ಗಾಣದ ಕನ್ನಪ್ಪ ಬಸವೇಶ್ವರ ಸಮಕಾಲೀನರು ಪು. 705
2. ಎಸ್. ವಿದ್ಯಾಶಂಕರ : ಸಮಗ್ರ ವಚನ ಸಂಪುಟ–7 ಪು. 237
3. ಫ.ಗು.ಹಳಕಟ್ಟಿ : ಶಿವಶರಣರ ಚರಿತ್ರೆಗಳು ಭಾಗ 3 ಪು. 147
4. ಆರ್. ನರಸಿಂಹಾಚಾರ್ಯರು : ಕವಿಚರಿತೆ ಸಂಪುಟ 2 ಪು. 741
5. ಫ.ಗು.ಹಳಕಟ್ಟಿ : ಶಿವಶರಣರ ಚರಿತ್ರೆಗಳು ಭಾಗ–3 ಪು. 148

**ಪರಾಮರ್ಶನ ಗ್ರಂಥಗಳು:**


1. ಟಿ. ಎನ್. ಮಲ್ಲಪ್ಪ ಸಂ: ಬಸವೇಶ್ವರ ಸಮಕಾಲೀನರು ಪ್ರ: ಬಸವ ಸಮಿತಿ, ಬೆಂಗಳೂರು, 1967, (ಅದರಲ್ಲಿ ಕೆ.ಪಿ.ಶಿವಲಿಂಗಯ್ಯ : ಗಾಣದ ಕನ್ನಪ್ಪ ಲೇಖನ)
2. ಎಸ್. ವಿದ್ಯಾಶಂಕರ : ಸಮಗ್ರ ವಚನ ಸಂಪುಟ–7 ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2022
3. ಫ.ಗು.ಹಳಕಟ್ಟಿ : ಶಿವಶರಣರ ಚರಿತ್ರೆಗಳು ಭಾಗ 3 ಶಿವಾನುಭವ ಗ್ರಂಥಮಾಲೆ, ವಿಜಾಪುರ, 1954
4. ಆರ್. ನರಸಿಂಹಾಚಾರ್ಯರು : ಕವಿಚರಿತೆ ಸಂಪುಟ 2 ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1995
5. ಎಸ್. ವಿದ್ಯಾಶಂಕರ : ಸಮಗ್ರ ವೀರಶೈವ ಸಾಹಿತ್ಯ ಚರಿತ್ರೆ ಸಂ.1 ಪ್ರ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2014



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.